**ದಿನಾಂಕಃ 08.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ವಾದಿ ಗೊತ್ತು. ನಾವು ಒಂದೇ ಊರಿನವರು. ವಾದಿಯ ಗಂಡ ಸಹ ಪರಿಚಯ ಇರುತ್ತಾರೆ. ವಾದಿಯು ಅವರ ಜಮೀನಿನ ಸ್ವಾಧೀನಕ್ಕೆ ನಾವು ಹೋಗಿರುತ್ತೇವೆಂದು ದಾವೆಯನ್ನು ಹೂಡಿರುತ್ತಾರೆ. ವಾದಿಯು ದಾವೆಯನ್ನು ಸರ್ವೆ ನಂ. 84 ರಲ್ಲಿ ಹೂಡಿರುತ್ತಾರೆ. ಅದರಲ್ಲಿ ವಾದಿಯ ಎಷ್ಟರ ಸ್ವಾಧೀನ ದಲ್ಲಿರುತ್ತಾರೆ ಅಥವಾ ಅದು ಎಷ್ಟಿರುತ್ತದೆಂದು ಗೊತ್ತಿರುವುದಿಲ್ಲ. ಸದರಿ ಸರ್ವೆ ನಂ. ವಾದಿಯು ಸ್ವಾಧೀನದಲ್ಲಿರುವುದಿಲ್ಲ. ವಾದಿಯ ಹೆಸರಿನಲ್ಲಿರುವ ದಾಖಲೆಗಳನ್ನು ಇಲ್ಲಿವರೆಗೂ ನೋಡಿರುವುದಿಲ್ಲ. ವಾದಿಯು ದಾವೆಯಲ್ಲಿ ಹಾಕಿರುವ ದಾಖಲೆಗಳನ್ನು ನೋಡಿರುವುದಿಲ್ಲ. ವಾದಿಯು ಅವರ ಜಮೀನಿನಲ್ಲಿ ನಾವು ಸ್ವಾಧೀನದಲ್ಲಿದೆವೆಂದು ದಾವೆ ಹೂಡಿರುತ್ತಾರೆ.

ನನ್ನ ಜಮೀನು ಸರ್ವೆ ನಂ. 84/2 ಸ್ವತ್ತನ್ನು ನನ್ನ ತಾಯಿಯವರು 1996 ರಲ್ಲಿ ಕ್ರಯದ ಮೂಲಕ ಪಡೆದಿರುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅವರು ಖರೀದಿಸಿದಾಗ ಸ್ವತ್ತಿನ ಸಂಖ್ಯೆಯು ಸರ್ವೆ ನಂ. 84/1 ಆಗಿರುತ್ತದೆ. ನಂತರ 84/2 ಎಂದು ಆಗಿರುತ್ತದೆ. 2 ಕ್ರಯ ಪತ್ರಗಳ ಆಧಾರದ ಮೇಲೆ ತಲಾ 1.4 ಎಕರೆ ಜಾಗಗಳಿಗೆ ಹಾಗೂ ಕರಾಬು 7 ಗುಂಟೆ ಇರುತ್ತದೆ ಹಾಗೂ ಒಟ್ಟು ಸೇರಿ 2 ಎಕರೆ 8 ಗುಂಟೆ ಹಾಗೂ 7 ಗುಂಟೆ ಕರಾಬು ಇರುತ್ತದೆ. ಸದರಿ ಜಮೀನುಗಳಲ್ಲಿ ತಿಮ್ಮಯ್ಯ ಹಾಗೂ ಕೆ.ಪಿ. ನಾರಾಯಣ ರವರಿಂದ ಖರೀದಿಸಲಾಗಿರುತ್ತದೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದರೂ ಸಹ ಹಾಜರು ಪಡಿಸಿದ್ದೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸರ್ವೆ ನಂ 84 ರಲ್ಲಿ ಒಟ್ಟು 4 ಎಕರೆ 14 ಗುಂಟೆ ಹಾಗೂ ಕರಾಬು 13 ಗುಂಟೆ ಆಗಿರುತ್ತದೆ. ಸರ್ವೆ ನಂ 84 ರಲ್ಲಿ 2 ಪೋಡಿ ಗಳಾಗಿರುತ್ತವೆ. 2022 ರಲ್ಲಿ 2 ಪೋಡಿ ಗಳಾಗಿರುತ್ತವೆ. ಅವುಗಳು ಸರ್ವೆ ನಂ. 84/1 ಮತ್ತು 84/2 ಆಗಿರುತ್ತವೆ. ಅದಕ್ಕೂ ಮೊದಲು ಸರ್ವೆ ನಂ 84/1 , 84/2 ಹಾಗೂ 84/3 ಎಂದು ಇದ್ದವು ಎಂದರೆ ಸರಿ. ಸರ್ವೆ ನಂ 84/1 ರಲ್ಲಿ 2 ಎಕರೆ 8 ಗುಂಟೆ ಜಮೀನು ಇತ್ತು . ಸರ್ವೆ ನಂ 84/2, 84/3 ರಲ್ಲಿ ಎಷ್ಟಿತ್ತೆಂದು ಗೊತ್ತಿಲ್ಲ. ದಾವೆಯಲ್ಲಿ ಹಾಜರಾದ ನಂತರ ಸದರಿ ಸ್ವತ್ತುಗಳಿಗೆ ಎಷ್ಟು ವಿಸ್ತೀರ್ಣ ಇತ್ತೆಂದು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ಸರ್ವೆ ನಂ 84/2 ಮತ್ತು 84/3 ರಲ್ಲಿ ಗೌರಮ್ಮ ರವರು ಇದ್ದರು. 84/1 ರಲ್ಲಿರುವ ಸ್ವತ್ತನ್ನು ನಾವು ಖರೀದಿಸಿರುತ್ತೇವೆ. ವಾದಿಯು ಸರ್ವೆ ನಂ 84/3 ರಲ್ಲಿ ಗೌರಮ್ಮರವರಿಂದ ಕ್ರಯಕ್ಕೆ ಪಡೆದಿರುವ ವಿಷಯ ಗೊತ್ತಿರುವುದಿಲ್ಲ. ದಾವೆಯ ನಂತರ ಕ್ರಯಕ್ಕೆ ಪಡೆದಿರುವ ವಿಷಯ ತಿಳಿದುಬಂದಿರುತ್ತದೆ. ಆದರೆ, ಸರ್ವೆ ನಂ 84/2 ಅಥವಾ 84/3 ರಲ್ಲಿ ಯಾವುದು ಕ್ರಯ ಮಾಡಿರುತ್ತಾರೆಂದು ಗೊತ್ತಿರುವುದಿಲ್ಲ.

ವಾದಿಯು ದಾವೆಯನ್ನು ಸರ್ವೆ ನಂ 84/3 ರಲ್ಲಿ 1 ಎಕರೆ 11 ಗುಂಟೆ ಜಾಗದ ಮೇಲೆ ಹೂಡಿದ್ದು ಅದರ ಬಗ್ಗೆ ವಾದಿಯು ದಾವೆ ಹೂಡಿದ ಮೇಲೆ ತಿಳಿದುಬಂದಿರುತ್ತದೆ. ಮುಂದುವರೆದು ದಾವೆ ಹೂಡುವ ಸಮಯಕ್ಕೆ ಸರ್ವೆ ನಂ 84/3 ಎಂದು ಇರಲಿಲ್ಲ, ಕೇವಲ 84/1 ಮತ್ತು 84/2 ಇದ್ದವು. ದಾವೆ ಹೂಡುವ ಮೊದಲು ಸರ್ವೆ ನಂ 84/1, 84/2 ಮತ್ತು 84/3 ಇದ್ದವು ಇಲ್ಲವೋ ಎಂಬುದು ಗೊತ್ತಿಲ್ಲ. ಆದರೆ 84/1 ರಲ್ಲಿ ನಾನು ಇರುತ್ತೇನೆ.

ಮೊದಲು ಇದ್ದಂತಹ ಸರ್ವೆ ನಂ 84/1,84/2 ಮತ್ತು 84/3 ಅನ್ನು ಬದಲಿಸಬೇಕೆಂದು DDLR ಅವರಿಗೆ 2017-18 ರಲ್ಲಿ ನಾನೇ ಅರ್ಜಿಯನ್ನು ನೀಡಿರುತ್ತೇನೆ. 2017-18 ರಲ್ಲಿ ಸರ್ವೆ ನಂ 84/3 ರಲ್ಲಿ ಯಾರ ಹೆಸರನಲ್ಲಿತ್ತೆಂದರೆ ಗೊತ್ತಿಲ್ಲ. ಸಾಕ್ಷಿಗೆ 2016-17 ನೇ ಪಹಣಿಯನ್ನು ತೋರಿಸಲಾಗಿ ಅದರಲ್ಲಿ ಯಾರ ಹೆಸರು ಇರುತ್ತದೆಂದು ಕೇಳಿದಾಗ ಸಾಕ್ಷಿಯು ನೋಡಿ ವಾದಿಯ ಗಂಡನ ಹೆಸರು ಇರುತ್ತದೆಂದು ತಿಳಿಸುತ್ತಾರೆ. DDLR ರವರಿಗೆ ಸಲ್ಲಿಸಿದ ಅರ್ಜಿಯಲ್ಲಿ ವಾದಿಯನ್ನು ಸಹ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಕಾರಣ ಸರ್ವೆ ನಂ 82,83 ಹಾಗೂ 84 ರಲ್ಲಿ ಬರುವಂತಹ ಎಲ್ಲಾ ವ್ಯಕ್ತಿಗಳನ್ನು ಅದರಲ್ಲಿ ಸೇರಿಸಲಾಗಿರುತ್ತದೆ.

ನಿಡಿ 15 ಮತ್ತು 16 ರಲ್ಲಿ ವಾದಿಯ ಹೆಸರಿಗೆ 1 ಎಕರೆ 11 ಗುಂಟೆ ಜಾಗ ಇರುತ್ತದೆಂದು ತೋರಿಸಲಾಗಿರುತ್ತದೆಂದರೆ ಸರಿ. ಮುಂದುವರೆದು 2019 ರಲ್ಲಿ ಒಟ್ಟುಗೂಡಿಸಲಾಗಿರುತ್ತದೆಂದು ಉತ್ತರಿಸುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು**.

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**